# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 832 |
| ಸದಸ್ಯರ ಹೆಸರು : | ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ : | 11-03-2020 |
| ಉತ್ತರಿಸುವ ಸಚಿವರು : | ಮಾನ್ಯ ಕಂದಾಯ ಸಚಿವರು |

| ಪ್ರಶ್ನೆ | | ಉತ್ತರ |
|---|---|---|
| (ಅ) | ಜುಲೈ-19 ರ ಮಾಹೆಯಿಂದ ಅಕ್ಟೋಬರ್-19 ರ ಮಾಹೆಯವರೆಗೆ ನೆರೆ, ಮಳೆಗೆ ಒಳಗಾದ ಜಿಲ್ಲೆಗಳು ಯಾವುವು; | ಪ್ರವಾಹಕ್ಕೆ ಒಳಗಾದ ಒಟ್ಟು 25 ಜಿಲ್ಲೆಗಳ ವಿವರ **ಅನುಬಂಧ-1** ರಲ್ಲಿ ನೀಡಿದೆ. |
| (ಆ) | ಈ ಪ್ರವಾಹದಿಂದ ಹಾನಿಗೊಳಗಾದವರ ಸಂಖ್ಯೆ ಎಷ್ಟು; ಮನೆ ಕಳೆದುಕೊಂಡಿರುವವರ ಸಂಖ್ಯೆ ಎಷ್ಟು; | ಪ್ರವಾಹದಿಂದ ಸುಮಾರು 7 ಲಕ್ಷ ಜನರು ಬಾಧಿತರಾಗಿದ್ದು, ಸಂತ್ರಸ್ಥರಿಗೆ ಕಾಳಜಿ ಕೇಂದ್ರಗಳಲ್ಲಿ ಆಶ್ರಯ ಕಲ್ಪಿಸಲಾಗಿದೆ. ನೆರೆಹಾವಳಿಯಿಂದ 1,25,795 ಮನೆ ಹಾನಿಯಾಗಿರುತ್ತದೆ. |
| (ಇ) | ನೆರೆ ಸಂತ್ರಸ್ಥರಿಗೆ ಸರ್ಕಾರವು ನೀಡಿರುವ ಸವಲತ್ತುಗಳು ಯಾವುವು; ಇದಕ್ಕಾಗಿ ವೆಚ್ಚ ಮಾಡಲಾದ ಅನುದಾನವೆಷ್ಟು? | ನೆರೆ ಸಂತ್ರಸ್ಥರಿಗೆ ಸರ್ಕಾರವು ನೀಡಿರುವ ಸವಲತ್ತುಗಳ ವಿವರವನ್ನು **ಅನುಬಂಧ-2** ರಲ್ಲಿ ನೀಡಿದೆ. |

ಕಂಇ 129 ಟಿಎನ್‌ಆರ್ 2020

(ಆರ್. ಅಶೋಕ)
ಕಂದಾಯ ಸಚಿವರು

## ಅನುಬಂಧ-1

## 2019-20ನೇ ಸಾಲಿನಲ್ಲಿ ಪ್ರವಾಹ ಪೀಡಿತ ಜಿಲ್ಲೆಗಳ ಪಟ್ಟಿ

| ಕ್ರಮ ಸಂಖ್ಯೆ | ಜಿಲ್ಲೆಗಳ ಹೆಸರು |
|---|---|
| 1 | ಬೆಳಗಾವಿ |
| 2 | ಬಾಗಲಕೋಟೆ |
| 3 | ರಾಯಚೂರು |
| 4 | ಕಲಬುರಗಿ |
| 5 | ಯಾದಗಿರಿ |
| 6 | ವಿಜಯಪುರ |
| 7 | ಗದಗ |
| 8 | ಹಾವೇರಿ |
| 9 | ಧಾರವಾಡ |
| 10 | ಶಿವಮೊಗ್ಗ |
| 11 | ಹಾಸನ |
| 12 | ಚಿಕ್ಕಮಗಳೂರು |
| 13 | ಕೊಡಗು |
| 14 | ದಕ್ಷಿಣ ಕನ್ನಡ |
| 15 | ಉಡುಪಿ |
| 16 | ಉತ್ತರ ಕನ್ನಡ |
| 17 | ಮೈಸೂರು |
| 18 | ದಾವಣಗೆರೆ |
| 19 | ಚಾಮರಾಜನಗರ |
| 20 | ಮಂಡ್ಯ |
| 21 | ಬಳ್ಳಾರಿ |
| 22 | ಕೊಪ್ಪಳ |
| 23 | ಚಿತ್ರದುರ್ಗ |
| 24 | ಬೆಂಗಳೂರು ನಗರ |
| 25 | ತುಮಕೂರು |

<u>ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ)</u>

**<u>ಪ್ರವಾಹ ಪರಿಸ್ಥಿತಿ:</u>**

ಬರದ ಛಾಯೆಯಲ್ಲಿದ್ದ ಕರ್ನಾಟಕ ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಸುರಿದ ಭಾರಿ ಮಳೆ ಹಾಗೂ ಮಹಾರಾಷ್ಟ್ರ ರಾಜ್ಯದ ಅಣೆಕಟ್ಟುಗಳಿಂದ ಕೃಷ್ಣಾ ನದಿಗೆ ಭಾರಿ ಪ್ರಮಾಣದಲ್ಲಿ ನೀರು ಹರಿದ ಪರಿಣಾಮವಾಗಿ ತೀವ್ರ ಸ್ವರೂಪದ ಪ್ರವಾಹ ಪರಿಸ್ಥಿತಿ ಉಂಟಾಯಿತು. ಮುಂಗಾರು ಋತುವಿನಲ್ಲಿ ವಾಡಿಕೆ ಸರಾಸರಿ ಮಳೆಗಿಂತ ಶೇ.16 ರಷ್ಟು ಹಾಗೂ ಹಿಂಗಾರು ಋತುವಿನಲ್ಲಿ ವಾಡಿಕೆಗಿಂತ ಶೇ.85ರಷ್ಟು ಹೆಚ್ಚು ಮಳೆಯಾಗಿದೆ. ಆಗಸ್ಟ್ 3ರಿಂದ 10ರ ವರೆಗೆ ಸುರಿದ ಮಳೆಯು ಕಳೆದ 118 ವರ್ಷಗಳಲ್ಲಿಯೇ ದಾಖಲೆ ಮಳೆಯಾಗಿದೆ.

2019–20ನೇ ಸಾಲಿನಲ್ಲಿ 25 ಜಿಲ್ಲೆಗಳ 119 ತಾಲ್ಲೂಕುಗಳನ್ನು ಪ್ರವಾಹ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ.

ಸರ್ಕಾರ ಹಾಗೂ ಜಿಲ್ಲಾಡಳಿತಗಳ ಪೂರ್ವ ಸಿದ್ಧತೆ ಹಾಗೂ ನೆರೆಯ ರಾಜ್ಯದೊಂದಿಗೆ ಸಮನ್ವಯದಿಂದಾಗಿ ಹೆಚ್ಚಿನ ಅನಾಹುತವಾಗದಂತೆ ತಡೆಯಲಾಯಿತು. ಕೇಂದ್ರ ಸರ್ಕಾರದ ನೆರವಿನೊಂದಿಗೆ ಜನರ ಸಂಕಷ್ಟಕ್ಕೆ ತಕ್ಷಣವೇ ಸ್ಪಂದಿಸಿ ಸುಮಾರು 7 ಲಕ್ಷ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಕರ್ನಾಟಕದ ಇತಿಹಾಸದಲ್ಲೇ ಅತಿ ದೊಡ್ಡದಾದ ರಕ್ಷಣಾ ಕಾರ್ಯಾಚರಣೆಯನ್ನು ಕೈಗೊಳ್ಳಲಾಗಿತ್ತು. ಎನ್‌ಡಿಆರ್‌ಎಫ್, ಸೇನಾಪಡೆಗಳು, ಕರಾವಳಿ ರಕ್ಷಣಾ ಪಡೆ, ರಾಜ್ಯ ಅಗ್ನಿಶಾಮಕದಳ, ಪೊಲೀಸರು, ಗೃಹ ರಕ್ಷಕದಳ ಮತ್ತಿತರ ತಂಡಗಳು ರಕ್ಷಣಾ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದವು.

**ನೆರೆ ಪೀಡಿತ ಪ್ರದೇಶಗಳಲ್ಲಿ ಈವರೆಗೆ ಕೈಗೊಳ್ಳಲಾಗಿರುವ ಪರಿಹಾರ ಕಾಮಗಾರಿಗಳ ವಿವರ:**

1. ಪ್ರವಾಹದಿಂದ 137 ಮೃತಪಟ್ಟ ಜನರ ವಾರಸುದಾರರಿಗೆ ತಲಾ ರೂ. 7.00 ಲಕ್ಷ ಗಳನ್ನು ವಿತರಿಸಲಾಗಿದೆ. **(ಎನ್.ಡಿ.ಆರ್.ಎಫ್ ಮಾರ್ಗಸೂಚಿ ಅನುಸಾರ ರೂ. 4.00 ಲಕ್ಷಗಳು, ರೂ 1.00 ಲಕ್ಷಗಳನ್ನು ಮಾನ್ಯ ಮುಖ್ಯ ಮಂತ್ರಿಯವರ ಪರಿಹಾರ ನಿಧಿಯಿಂದ ಹಾಗೂ ರೂ. 2.00 ಲಕ್ಷಗಳನ್ನು ಮಾನ್ಯ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ ವಿತರಿಸಲಾಗಿದೆ).**

2. ಆಗಸ್ಟ್ 2019ರ ಮಾಹೆಯಲ್ಲಿ ನೆರೆ ಹಾವಳಿಯಿಂದ ಮನೆ ಹಾನಿಯಾದ ಬಾಧಿತ ಕುಟುಂಬಗಳಿಗೆ ಗೃಹೋಪಯೋಗಿ ಸಲಕರಣೆಗಳನ್ನು (Clothing and Utensils) ಖರೀದಿಸಲು ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಪ್ರತಿ ಕುಟುಂಬಕ್ಕೆ ರೂ.3,800/–ಗಳನ್ನು ನಿಗದಿಪಡಿಸಿದ್ದು, ಇದರ ಜೊತೆಗೆ ರಾಜ್ಯ ಸರ್ಕಾರದ ವತಿಯಿಂದ ರೂ.6,200/– ಸೇರಿ ಒಟ್ಟು ರೂ.10,000/–ಕ್ಕೆ ಹೆಚ್ಚಿಸಿ ವಿಶೇಷ ಪ್ರಕರಣವೆಂದು ಅನುದಾನ ಬಿಡುಗಡೆ ಮಾಡಲಾಗಿದೆ. 2.07 ಲಕ್ಷ ಕುಟುಂಬಗಳಿಗೆ ರೂ.207 ಕೋಟಿ ಅನುದಾನವನ್ನು ಪಾವತಿಸಲಾಗಿದೆ.

3. i. ಪ್ರವಾಹದಿಂದ ಹಾನಿಗೊಳಗಾದ ದೋಣಿಗಳಿಗೆ ತಲಾ ರೂ.7,000/–ದಂತೆ ಹಾಗೂ ಬಲೆಗಳಿಗೆ ತಲಾ ರೂ.1,850/–ರಂತೆ ಕೇಂದ್ರ ಸರ್ಕಾರದ ಎಸ್‌ಡಿಆರ್‌ಎಫ್/ಎನ್‌ಡಿಆರ್‌ಫ್ ಮಾರ್ಗಸೂಚಿಯನ್ವಯ ನಿಗದಿಪಡಿಸಿದ್ದು, ಹಾನಿಗೊಳಗಾದ 661 ದೋಣಿಗಳಿಗೆ ಹಾಗೂ ಹಾನಿಗೊಳಗಾದ 1421 ಬಲೆಗಳಿಗೆ ಒಟ್ಟು ರೂ.85.89 ಲಕ್ಷಗಳನ್ನು ಪಾವತಿಸಲಾಗಿದೆ.

   ii. ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಹದಿಂದ ಹಾನಿಗೊಳಗಾದ ಮೀನುಗಾರರ 168 ದೋಣಿಗಳಿಗೆ ಎಸ್.ಡಿ.ಆರ್.ಎಫ್ ಮಾರ್ಗಸೂಚಿ ಮೊತ್ತದೊಂದಿಗೆ ಹೆಚ್ಚುವರಿಯಾಗಿ ರೂ 20,000/– ಮತ್ತು 460 ಬಲೆಗಳಿಗೆ ಎಸ್.ಡಿ.ಆರ್. ಎಫ್ ಮಾರ್ಗಸೂಚಿ ಮೊತ್ತದೊಂದಿಗೆ ಹೆಚ್ಚುವರಿಯಾಗಿ ರೂ.10,000/– ದಂತೆ ಒಟ್ಟು ರೂ. 79,60,000/– ಅನುದಾನವನ್ನು ವಿಶೇಷ ಪ್ರಕರಣವಾಗಿ ಪರಿಗಣಿಸಿ ರಾಜ್ಯ ಸರ್ಕಾರದಿಂದ ಪಾವತಿಸಲಾಗಿದೆ.

4. ಪ್ರವಾಹದಿಂದ ಹಾನಿಗೊಳಗಾದ ನೇಕಾರರ ಉಪಕರಣಗಳಿಗೆ ರೂ.4,100/– ಹಾಗೂ ಕಚ್ಚಾಮಾಲು/ ಸಿದ್ದಪಡಿಸಿದ ವಸ್ತುಗಳಿಗೆ ರೂ.4,100/–ರಂತೆ ಕೇಂದ್ರ ಸರ್ಕಾರದ ಎಸ್‌ಡಿಆರ್‌ಎಫ್/ಎನ್‌ಡಿಆರ್‌ಫ್ ಮಾರ್ಗಸೂಚಿಯನ್ವಯ ನಿಗದಿಪಡಿಸಿದ್ದು, ಹೆಚ್ಚುವರಿಯಾಗಿ ಹಾನಿಗೊಳಗಾದ ಕೈಮಗ್ಗ/ವಿದ್ಯುತ್ ಮಗ್ಗಗಳಿಗೆ ತಲಾ ರೂ.25,000/–ಗಳಂತೆ ಹಾಗೂ ಹಾನಿಗೊಳಗಾದ ಕಚ್ಚಾಮಾಲು/ ಸಿದ್ದಪಡಿಸಿದ ವಸ್ತುಗಳಿಗೆ ಪ್ರತಿ ಸಂತ್ರಸ್ಥರಿಗೆ ತಲಾ ರೂ.25,000/–ದಂತೆ ರಾಜ್ಯ ಸರ್ಕಾರದ ವತಿಯಿಂದ ಬಿಡುಗಡೆ ಮಾಡಲಾಗಿದೆ.

5. ಕೇಂದ್ರ ಸರ್ಕಾರದ ಎನ್‌ಡಿಆರ್‌ಎಫ್/ಎಸ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ಪೂರ್ಣ/ತೀವ್ರ ಹಾನಿಯಾದ ಮನೆಗಳಿಗೆ ತಲಾ ಹಾಗೂ ಭಾಗಶಃ ಹಾನಿಯಾದ ಮನೆಗಳಿಗೆ ತಲಾ ರೂ.5,200/– ನಿಗದಿಪಡಿಸಿದ್ದು, ನೆರೆ ಹಾವಳಿಯಿಂದ ಮನೆ ಕಳೆದುಕೊಂಡ ಸಂತ್ರಸ್ಥರ ಪೂರ್ಣ ಹಾನಿಯಾದ ಮನೆಗಳಿಗೆ ರೂ.5.00ಲಕ್ಷದಂತೆ, ತೀವ್ರ

ಹಾನಿಯಾದ ಮನೆಗಳಿಗೆ ತಲಾ ರೂ.3.00 ಲಕ್ಷಗಳನ್ನು ಹಾಗೂ ಭಾಗಶಃ ಹಾನಿಯಾದ ಮನೆಗಳಿಗೆ ತಲಾ ರೂ.50,000/-ಗಳ ಹೆಚ್ಚುವರಿ ಆರ್ಥಿಕ ನೆರವನ್ನು ನೀಡುವ ಮೂಲಕ ಹಾನಿಯಾದ ಮನೆಗಳ ಪುನರ್ ನಿರ್ಮಾಣಕ್ಕಾಗಿ ವ್ಯವಸ್ಥೆ ಕಲ್ಪಿಸಿದೆ. ಈ ಆರ್ಥಿಕ ಸಹಾಯವು ದೇಶದಲ್ಲೇ ಅತ್ಯಂತ ಹೆಚ್ಚಿನ ನೆರವು. ಇದುವರೆಗೆ ರೂ.911.28 ಕೋಟಿಗಳನ್ನು 1,25,795 ಹಾನಿಗೊಳಗಾದ ಮನೆಗಳ ನಿರ್ಮಾಣಕ್ಕಾಗಿ ನೀಡಿದೆ. (ಆಗಸ್ಟ್ ಮಾಹೆಯಲ್ಲಿ 1,01,558 ಮನೆ ಹಾಗೂ ಸೆಪ್ಟೆಂಬರ್ & ಅಕ್ಟೋಬರ್ ಮಾಹೆಯಲ್ಲಿ 24,237 ಮನೆ ಹಾನಿಯಾಗಿರುತ್ತದೆ.) ಪೂರ್ಣ ಮನೆ ಹಾನಿಯಾದ 2020 ಫಲಾನುಭವಿಗಳಿಗೆ ತಾತ್ಕಲಿಕ ಶೆಡ್ ನಿರ್ಮಾಣಕ್ಕಾಗಿ ತಲಾ ರೂ. 50,000/- ದಂತೆ ರೂ. 10.10 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

6. ರೂ. 5.00 ಲಕ್ಷ ಪರಿಹಾರಕ್ಕಾಗಿ ಅರ್ಹರಾದ ಕುಟುಂಬಗಳಿಗೆ ಗರಿಷ್ಠ 10 ತಿಂಗಳ ಅವಧಿಗೆ ಸೀಮಿತಗೊಳಿಸಿ ಮಾಸಿಕ ರೂ.5000/- ದಂತೆ ಬಾಡಿಗೆ ಮೊತ್ತವನ್ನು (ಮುಂಗಡವಾಗಿ ರೂ.25,000/-ಗಳನ್ನು) ಅಥವಾ ಮನೆಗಳನ್ನು ಪುನರ್ ನಿರ್ಮಿಸುವವರೆಗೆ ಯಾವುದು ಮೊದಲೊ ಅಲ್ಲಿಯವರೆಗೆ ಪಾವತಿಸಲಾಗುವುದು. ಪ್ರಸ್ತುತ 5180 ಕುಟುಂಬಗಳಿಗೆ ರೂ. 2.59 ಕೋಟಿ ಬಿಡುಗಡೆ ಮಾಡಲಾಗಿದೆ.

7. ಎನ್‌ಡಿಆರ್‌ಎಫ್/ಎಸ್‌ಡಿಆರ್‌ಎಫ್ ನಿಗದಿತ ಮಾನದಂಡಕ್ಕಿಂತ ಹೆಚ್ಚುವರಿಯಾಗಿ ರೂ.10,000/- ಇನ್‌ಪುಟ್ ಸಬ್ಸಿಡಿಯನ್ನು ಮಳೆಯಾಶ್ರಿತ, ನೀರಾವರಿ ಹಾಗೂ ಬಹುವಾರ್ಷಿಕ ಬೆಳೆ ಹಾನಿ (ಆಗಸ್ಟ್ ಮಾಹೆಯಲ್ಲಿ 9,70,352 ಹೆಕ್ಟೇರ್ ಹಾಗೂ ಸೆಪ್ಟೆಂಬರ್ & ಅಕ್ಟೋಬರ್ ಮಾಹೆಯಲ್ಲಿ 76,585 ಹೆಕ್ಟೇರ್ ಒಟ್ಟು 10,46,937 ಹೆಕ್ಟೇರ್ ಬೆಳೆ ಹಾನಿಯಾಗಿರುತ್ತದೆ) ಹೊಂದಿದ ಬಾಧಿತ ರೈತರಿಗೆ ನೀಡುವ ಮೂಲಕ ರೈತರ ಸಂಕಷ್ಟಗಳಿಗೆ ಸಕಾಲದಲ್ಲಿ ಸ್ಪಂದಿಸಿದೆ. ಸುಮಾರು 6,45,100 ರೈತರ ಬ್ಯಾಂಕ್ ಖಾತೆಗೆ ಇದುವರೆಗೆ ರೂ.1185.40 ಕೋಟಿ ಜಮಾ ಮಾಡಲಾಗಿದೆ.

8. ಅತಿವೃಷ್ಟಿಯಿಂದ ಹಾನಿಯಾಗಿರುವ ಶಾಲಾ ಕಟ್ಟಡ, ಅಂಗನವಾಡಿ, ಆಸ್ಪತ್ರೆ, ರಸ್ತೆಗಳು, ಸೇತುವೆಗಳ ಪುನರ್ ನಿರ್ಮಾಣಕ್ಕಾಗಿ ಹಾಗೂ ದುರಸ್ಥಿಗಾಗಿ ಹೆಚ್ಚಿನ ಆದ್ಯತೆ ನೀಡಿದೆ. ಹಾನಿಯಾಗಿರುವ ಮೂಲಭೂತ ಸೌಲಭ್ಯಗಳ ದುರಸ್ಥಿ ಹಾಗೂ ಪುನರ್ ನಿರ್ಮಾಣಕ್ಕಾಗಿ ರೂ.500 ಕೋಟಿ ಬಿಡುಗಡೆ ಮಾಡಿದೆ. ಸದರಿ ಅನುದಾನದ ಪೈಕಿ ಅತಿವೃಷ್ಟಿಯಿಂದ ಹಾನಿಯಾದ 6072 ಪ್ರಾಥಮಿಕ ಶಾಲೆಗಳ ತುರ್ತು ದುರಸ್ಥಿಗಾಗಿ ಮಾರ್ಗಸೂಚಿ ಸಡಿಲಿಸಿ ರೂ.200 ಕೋಟಿ ಹಾಗೂ ಅತಿವೃಷ್ಟಿಯಿಂದ ಹಾನಿಯಾದ 2958 ಅಂಗನವಾಡಿ ಕಟ್ಟಡಗಳ ತುರ್ತು ದುರಸ್ತಿಗಾಗಿ ರೂ.54.61 ಕೋಟಿ ಬಿಡುಗಡೆ ಮಾಡಲಾಗಿದೆ.

9. ಲೋಕೋಪಯೋಗಿ ಇಲಾಖೆಯಿಂದ ಹಾನಿಗೊಳಗಾದ ರಸ್ತೆಗಳ ದುರಸ್ಥಿ ಹಾಗೂ ಪುನರ್ ನಿರ್ಮಾಣಕ್ಕಾಗಿ ರೂ.500 ಕೋಟಿ ಹಂಚಿಕೆ ಮಾಡಿದ್ದು, ರೂ. 152.02 ಕೋಟಿ ಬಿಡುಗಡೆ ಮಾಡಲಾಗಿದೆ.

10. ಸಣ್ಣ ನೀರಾವರಿ ಇಲಾಖೆಯ ಕೆರೆಗಳ ದುರಸ್ಥಿಗಾಗಿ ಸಣ್ಣ ನೀರಾವರಿ ಇಲಾಖೆಯಿಂದ ರೂ.449.58 ಕೋಟಿ ಹಂಚಿಕೆ ಮಾಡಿದ್ದು, ರೂ. 151.02 ಕೋಟಿ ಬಿಡುಗಡೆ ಮಾಡಲಾಗಿದೆ.

11. ಗ್ರಾಮೀಣ ಪ್ರದೇಶಗಳ ರಸ್ತೆ ಹಾಗೂ ಗ್ರಾಮೀಣ ಕುಡಿಯುವ ನೀರಿನ ಸರಬರಾಜಿನ ಕೆಲಸಗಳ ದುರಸ್ಥಿಗಾಗಿ ರೂ.1500.00 ಕೋಟಿ ಹಂಚಿಕೆ ಮಾಡಿದ್ದು, ರೂ. 500.00 ಕೋಟಿ ಬಿಡುಗಡೆ ಮಾಡಲಾಗಿದೆ.

12. ರೂ.201.12 ಕೋಟಿ ಅನುದಾನವನ್ನು ವಿದ್ಯುತ್ ಉಪಕರಣಗಳ ದುರಸ್ಥಿಗಾಗಿ ಬಿಡುಗಡೆ ಮಾಡಲಾಗಿದೆ.

ಒಟ್ಟಾರೆ ಪ್ರವಾಹ ಪರಿಸ್ಥಿತಿಯಿಂದ ಹಾನಿಯಾದ ಬೆಳೆ, ಮನೆ, ಮೂಲಭೂತ ಸೌಕರ್ಯಗಳ ದುರಸ್ಥಿಗಾಗಿ ವಿವಿಧ ಇಲಾಖೆಗಳ ವತಿಯಿಂದ ಒಟ್ಟು ರೂ.6108.70 ಕೋಟಿಗಳನ್ನು ಮಂಜೂರು ಮಾಡಿದ್ದು, ರೂ. 4462.12 ಕೋಟಿ ಬಿಡುಗಡೆ ಮಾಡಲಾಗಿದೆ.

ಆಗಸ್ಟ್ 2019ರ ಮಾಹೆಯಲ್ಲಿ ಉಂಟಾದ ಪ್ರವಾಹದಿಂದ ರೂ.35,160.81 ಕೋಟಿ ಅಂದಾಜು ಹಾನಿಯಾಗಿದ್ದು, ಪ್ರವಾಹ ಪರಿಹಾರಕ್ಕಾಗಿ ಮಾರ್ಗಸೂಚಿಯಂತೆ ರೂ.3891.80ಕೋಟಿ ಆರ್ಥಿಕ ನೆರವನ್ನು ಕೋರಿ ಕೇಂದ್ರ ಸರ್ಕಾರಕ್ಕೆ ಮೆಮೊರಾಂಡಮ್ ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರದಿಂದ ಎನ್.ಡಿ.ಆರ್.ಎಫ್ ಅಡಿ ರೂ.1869.85ಕೋಟಿ ಅನುಮೋದನೆ ಮಾಡಿದ್ದು, ಪ್ರಸ್ತುತ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ರೂ.1029.55 ಕೋಟಿ ಅನುದಾನ ಲಭ್ಯವಿದೆ.